ದಿನಾಂಕಃ 16-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಅರ್ಜಿಯ ಆದೇಶದ ಮೆರೇಗೆ ಪಾಟೀಸವಾಲು 5 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಟಿ ಎನ್ ವಕೀಲರಿಂದ

ಈ ದಾವೆಯನ್ನು ರಘು ಮತ್ತು ರೆಡ್ಡಪ್ಪ ರವರ ಮೇಲೆ ಸಲ್ಲಿಸಿರುತ್ತೇನೆ. ದಾವೆಯನ್ನು ಭಾಗ ಕೇಳಿ ಹಾಕಿರುತ್ತೇನೆ. ನಾನು ವಾಸ ಇರುವುದು ನಂದನಹೊಸಹಳ್ಳಿ ಗ್ರಾಮದಲ್ಲಿ. ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಎ ಕೆ ಮುನಿಗಾ ಎನ್ನುವವರು ನನ್ನ ತಾತ. ನನ್ನ ತಂದೆ ಹೆಸರು ಎ ಕೆ ಮುನಿಯಪ್ಪ. ಎ ಕೆ ಮುನಿಗಾ ಹೆಂಡತಿ ಹೆಸರು ನಾಗಮ್ಮ ಎಂದರೆ ಸಾಕ್ಷಿಯು ನಾಗಮ್ಮ ಮತ್ತು ಮುನಿಯಮ್ಮ. ಎ ಕೆ ಮುನಿಗಾ ರವರಿಗೆ ಒಬ್ಬ ಗಂಡು ಮಗ ಮೂರು ಜನ ಹೆಣ್ಣು ಮಕ್ಕಳು. ಹೆಣ್ಣು ಮಕ್ಕಳು ತೀರಿಕೊಂಡಿರುತ್ತಾರೆ. ಎ ಕೆ ಮುನಿಗಾ ರವರ ಹೆಂಡತಿ ನಾಗಮ್ಮ ಅವರ ಮಕ್ಕಳು, ದೊಡ್ಡ ಕೋನಪ್ಪ, ಬಾಲಮ್ಮ, ಯರಮ್ಮ, ಜಾಲಾರಮ್ಮ , ನಲ್ಲಕದಿರಮ್ಮ, ಸೀತಮ. ಮುನಿಯಪ್ಪ ಮುನಿಮುದ್ದಪ್ಪ ಕುಂಟಿ ದಾಸಪ್ಪ ಅವರ ಮಕ್ಕಳು ಎಂದರೆ ಸರಿಯಲ್ಲ, ಯರಮ್ಮ ಮತ್ತು ಎ ಕೆ ಮುನಿಯಪ್ಪ ಮಾತ್ರ ಮಕ್ಕಳು ಎ ಕೆ ಮುನಿಗಾ ರವರ ತಂದೆ ಹೆಸರು ಎ ಕೆ ಮುನಿಗಾ ಎಂದರೆ ಅಲ್ಲ. ಕೋನಪ್ಪ ನಮ್ಮ ಸಂಬಂಧಿಕರು ಅಲ್ಲ.

ಜಾಲಾರಮ್ಮ ಯಾರು ಅಂತ ಗೊತ್ತಿರುವುದಿಲ್ಲ. ನಾಯಿಂದ್ರಹಳ್ಳಿಯಲ್ಲಿ ನನಗೆ ಯಾರೂ ಸಂಬಂಧಿಕರು ಇಲ್ಲ. ನಾಯಿಂದ್ರಹಳ್ಳಿಯ ಪೋತಲಪ್ಪ ಗೊತ್ತಿರುವುದಿಲ್ಲ. 5 ನೇ ಪ್ರತಿವಾದಿ ರೆಡ್ಡಪ್ಪನಿಗೆ ನಮಗೆ ಸಂಬಂಧ ಇರುವುದಿಲ್ಲ. ನನ್ನ ತಂದೆಗೆ ಇಬ್ಬರು ಹೆಂಡತಿಯರು ದೊಡ್ಡವೆಂಕಟಮ್ಮ, ಚಿಕ್ಕವೆಂಕಟಮ್ಮ. ದೊಡ್ಡವೆಂಕಟಮ್ಮ ನನ್ನ ತಾಯಿ. ದೊಡ್ಡವೆಂಕಟಮ್ಮ ನ ಮಕ್ಕಳು ದೊಡ್ಡನಾರಾಯಣಪ್ಪ, ನರಸಿಂಹಪ್ಪ, ಸೀತಪ್ಪ ವೆಂಕಟನರಸಮ್ಮ ಮುನೇಶಪ್ಪ, ಶ್ರೀರಾಮಪ್ಪ. ಚಿಕ್ಕವೆಂಕಟಮ್ಮನ ಮಕ್ಕಳು. ಲಕ್ಷ್ಮಪ್ಪ ಲಕ್ಷ್ಮಕ್ಕ ರಘು ಮೂರು ಜನ. ಪ್ರತಿವಾದಿ 1 ನನ್ನ ತಂದೆ ಬದುಕಿರುತ್ತಾರೆ. ನನ್ನ ತಂದೆ ಎಲ್ಲರ ಜೊತೆ ಇರುತ್ತಾರೆ. 5 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಏಕೆ ಸೇರಿಸಿರುತ್ತೀರಿ ಎಂದರೆ ನಮ್ಮ ಜಮೀನಿನಲ್ಲಿ ಉಳುಮೆ ಮಾಡಲು ಬಂದಿದ್ದು, ನಮ್ಮ ತಂದೆ ಅವರಿಗೆ

ಜಮೀನು ಮಾರಾಟ ಮಾಡಿರುತ್ತಾರೆ ಅಂತ ಬಂದಿರುತ್ತಾರೆ. ಮೂರು ವರ್ಷಗಳ ಹಿಂದೆ ಬಂದಿರುತ್ತಾರೆ. ಗಲಾಟೆಯಾದಾಗ ಪ್ರತಿವಾದಿ 1 ರವರು ಇದ್ದು ನಾನು ಜಮೀನನ್ನು ಕೊಟ್ಟಿರುವುದಿಲ್ಲ ಎಂದು ಹೇಳಿರುತ್ತಾರೆ. ಜಮೀನು ಖರೀದಿ ಮಾಡಿದಾಗಿನಿಂದಲೂ 5 ನೇ ಪ್ರತಿವಾದಿ ಆ ಜಮೀನಿನಲ್ಲಿ ಬೆಳೆ ಇಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಸರ್ವೆ ನಂ. 167 ಜಮೀನು ಯಾರ ಹೆಸರಿನಲ್ಲಿ ಇದೆ ಎಂದರೆ 5 ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿದೆ. 1 ಎಕರೆ 5 ಗುಂಟೆ ಜಮೀನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಅದರ ಪೂರ್ವಕ್ಕೆ 1 ನೇ ಪ್ರತಿವಾದಿ, ಪಶ್ಚಿಮಕ್ಕೆ ನಿಮ್ಮ ತಂದೆಯವರ ಜಮೀನು ಎಂದರೆ ಸರಿಯಲ್ಲ. ಉತ್ತರಕ್ಕೆ ಸರ್ವೆ ನಂ.180 ಎಂದರೆ ಸರಿಯಲ್ಲ ಕೆರೆ, ದಕ್ಷಿಣಕ್ಕೆ ಸರ್ವೆ ನಂ.169 ಎಂದರೆ ಸರ್ಕಾರಿ ಗೋಮಾಳ ಜಾಗ.

1989-90 ರಿಂದ 2001-2002 ರವರೆಗಿನ ಸರ್ವೆ ನಂ.165 ರ ಪಹಣಿ ಪತ್ರಿಕೆಯಲ್ಲಿ ಇರುವ ಮುನಿಗಾ ಬಿನ್ ಮುನಿಗಾ ಎಂದರೆ ನನ್ನ ತಂದೆ ಮತ್ತು ನನ್ನ ತಾತ. ನಾನು ನ್ಯಾಯಾಲಯಕ್ಕೆ ವಂಶ ವೃಕ್ಷವನ್ನು ಹಾಜರುಪಡಿಸಿರುತ್ತೇನೆ. ನ್ಯಾಯಾಲಯಕ್ಕೆ ವಂಶ ವೃಕ್ಷವನ್ನು ಹಾಕದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.